ಕಂದಾಯ ಇಲಾಖೆ

ನಿಯಮ - 720
ಕ್ರ ಮ ಸಂಖ್ಯೆ - 81

# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಎಸ್. ವೀಣಾ ಅಚ್ಚಯ್ಯ ಇವರು ನಿಯಮ 330ರಡಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

**ವಿಷಯ:-**

ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, ಹುದಿಕೇರಿ ಹೋಬಳಿ, ತೆರಾಲು ಗ್ರಾಮದ ಜಮೀನನ್ನು ವಿದೇಶಿ ಪ್ರಜೆಗಳಿಗೆ ಅಕ್ರಮ ಹಾಗೂ ಕಾನೂನು ಬಾಹಿರವಾಗಿ ಖಾತೆ ಮಾಡಿಕೊಟ್ಟಿರುವ ಗಂಭೀರ ಪ್ರಕರಣದ ಕುರಿತು ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:-**

ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ತಹಶೀಲ್ದಾರರ ವರದಿಯಂತೆ ಶುದ್ಧ ಕ್ರಯ ಪತ್ರ ಸಂ:521/97-98ರ ಮೇರೆಗೆ ದಿನಾಂಕ:13.10.1997ರಲ್ಲಿ ಖರೀದಿಸಿದಂತೆ ಅನಿಲ್ ಕುಮಾರ್ ಮಲ್ಹೋತ್ರ ಹಾಗೂ ವಿದೇಶಿ ಪ್ರಜೆ ಅನಿಲ್ ಕುಮಾರ್ ಮಲ್ಹೋತ್ರ ರವರ ಪತ್ನಿ ಪಮೇಲಾ ಗಾಲೆ ಮಲ್ಹೋತ್ರರವರ ಹೆಸರಿಗೆ ಟಿವಿಟಿ/ಎಂ.ಸಿ.ಜೆ/1003/97-98 ಹಾಗೂ ಕಪಹು/ಎಂಸಿ.ಜೆ/49/98-99ರಂತೆ ತೆರಾಲು ಗ್ರಾಮದ ಕೆಳಗಿನ ಸರ್ವೆ ನಂಬರ್‌ಗಳ ಪಹಣಿಗಳನ್ನು ಶುದ್ಧ ಕ್ರಯ ಪತ್ರ ಜೆ-ನಮೂನೆಯಂತೆ ಖಾತೆ ವರ್ಗಾವಣೆ ಮಾಡಲಾಗಿದೆ.

| ಕ್ರ.ಸಂ | ಸ.ನಂ. | ವಿಸ್ತೀರ್ಣ (ಎಕರೆಯಲ್ಲಿ) |
|---|---|---|
| 1 | 145 | 8.36 |
| 2 | 133/36 | 1.20 |
| 3 | 133/38 | 0.80 (ಮ್ಯುಟೇಷನ್ ಆಗಿದ್ದು, ಪಹಣಿ ದಾಖಲಾಗಿರುವುದಿಲ್ಲ) |
| 4 | 133/26 | 10.45 |
| 5 | 133/27 | 1.00 |

ತೆರಾಲು ಗ್ರಾಮದ ಖಾತೆ ಸ.ನಂ:82ರ ಜಮಾಬಂದಿ ದಾಖಲೆಯಂತೆ ಅನಿಲ್ ಕುಮಾರ್ ಮಲ್ಹೋತ್ರರವರ ಖಾತೆಯ 6ನೇ ಕಲಂನಲ್ಲಿ ಪತ್ನಿ ಪಮೇಲಾ ಗಾಲೆ ಮಲ್ಹೋತ್ರರವರ ಹೆಸರನ್ನು ಎಂ.ಸಿ ನಂ:03/92-93, ದಿನಾಂಕ:30.11.1993ರಲ್ಲಿ ಜಂಟಿ ಖಾತೆದಾರರಾಗಿ ಸೇರಿಸಲಾಗಿದೆ. ಸದರಿ ಸರ್ವೆ ನಂಬರುಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಸ.ನಂ. | ವಿಸ್ತೀರ್ಣ (ಎಕರೆಯಲ್ಲಿ) |
|---|---|---|
| 1 | 111/9 | 0.28 |
| 2 | 151/5 | 18.20 |
| 3 | 151/6 | 1.60 |
| 4 | 129 | 17.69 |

ಮ್ಯುಟೇಷನ್‌ನಲ್ಲಿ ಉಪವಿಭಾಗಾಧಿಕಾರಿಯವರ ಆದೇಶದ ಉಲ್ಲೇಖವಿದ್ದು, ತೆರಾಲು ಗ್ರಾಮದ ಸ.ನಂ:151/8ರ 5.00 ಎಕರೆ ಹಾಗೂ 151/9ರ 2.00 ಎಕರೆ ಜಾಗವನ್ನು ಶ್ರೀ ಅನಿಲ್ ಕುಮಾರ್ ಮಲ್ಹೋತ್ರ ರವರು ಶುದ್ಧ ಕ್ರಯಕ್ಕೆ ಖರೀದಿಸಿದ್ದು, 1961ರ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಕಲಂ79(ಎ) ಉಲ್ಲಂಘನೆಯಾಗಿರುವುದಿಲ್ಲವೆಂದು ಉಪವಿಭಾಗಾಧಿಕಾರಿಯವರ ಆದೇಶ ಸಂ:ಭೂ.ಸು/14/97-98, ದಿನಾಂಕ:08.09.1997ರಲ್ಲಿ ಆದೇಶವಾಗಿರುತ್ತದೆ. ಸದರಿ ಆದೇಶವನ್ನು ಉಲ್ಲೇಖಿಸಿ ಕ್ರಯ ಪತ್ರದಂತೆ ಖಾತೆ ವರ್ಗಾಯಿಸಿರುವುದಾಗಿ ಮ್ಯುಟೇಷನ್‌ನಲ್ಲಿ ದಾಖಲಾಗಿರುತ್ತದೆ.

..2..

ವಿದೇಶಿ ಪ್ರಜೆಗಳಿಗೆ ಕರ್ನಾಟಕದಲ್ಲಿ ಕೃಷಿ ಜಮೀನು ಖರೀದಿಸಲು ಅವಕಾಶವಿರುವುದಿಲ್ಲ. ವಿದೇಶಿ ಪ್ರಜೆಯು ಭಾರತದಲ್ಲಿ ವಾಸಿಸುತ್ತಿದ್ದಲ್ಲಿ ಸಂಬಂಧಿಸಿದ ರಾಜ್ಯ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಪಡೆದು ಖರೀದಿಸಲು ಅವಕಾಶವಿರುತ್ತದೆ (FEMA ಕಾಯ್ದೆಯಂತೆ).

ಉಪ ನೋಂದಣಾಧಿಕಾರಿ, ಪೊನ್ನಂಪೇಟೆ, ಕೊಡಗು ಜಿಲ್ಲೆ ಇವರ ಕಚೇರಿಯಲ್ಲಿ ನೋಂದಾಯಿಸಲಾದ ದಸ್ತಾವೇಜು ಸಂಖ್ಯೆ:521/97-98, ದಿನಾಂಕ:26.09.1997ರಲ್ಲಿ ತೆರಾಲು ಗ್ರಾಮದಲ್ಲಿ ಶ್ರೀ ಅನಿಲ್‌ಕುಮಾರ್ ಮಲ್ಹೋತ್ರ ಮತ್ತು ಅವರ ಪತ್ನಿ ಪಮೇಲಾ ಗಾಲೆ ಮಲ್ಹೋತ್ರ ರವರು ಕೃಷಿ ಭೂಮಿಯನ್ನು ಖರೀದಿಸಿರುವುದು ದಾಖಲಾಗಿರುತ್ತದೆ. ನೋಂದಾಯಿತ ದಾಸ್ತುವೇಜುಗಳಲ್ಲಿ ಶ್ರೀ ಅನಿಲ್ ಕುಮಾರ್ ಮಲ್ಹೋತ್ರ ಮತ್ತು ಅವರ ಪತ್ನಿ ಪಮೇಲಾ ಗಾಲೆ ಮಲ್ಹೋತ್ರ ರವರು ತಾವು ತೆರಾಲು ಗ್ರಾಮ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, ಇಲ್ಲಿ ನಿವಾಸಿಗಳೆಂದು ದಾಖಲಿಸಿಕೊಂಡಿರುತ್ತಾರೆ.

ನೋಂದಾಯಿತ ದಾಸ್ತುವೇಜಿನಂತೆ ಜೆ-ನಮೂನೆಯನ್ನು ತಹಶೀಲ್ದಾರ್ ಕಛೇರಿಯಲ್ಲಿ ಸ್ವೀಕೃತವಾದ ಕಾರಣ ಮ್ಯುಟೇಷನ್ ಅಂಗೀಕರಿಸಲಾಗಿದೆ.

ಈ ಪ್ರಕರಣದ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು..

**ಸಂ: ಕಂಇ 114 ಟಿಆರ್‌ಎಂ 2021**

**(ಆರ್. ಅಶೋಕ)**
ಕಂದಾಯ ಸಚಿವರು